ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1100
ಸದಸ್ಯರ ಹೆಸರು	ಶ್ರೀ ಪಿ ಎಂ ಮುನಿರಾಜು ಗೌಡ
ಉತ್ತರಿಸುವ ದಿನಾಂಕ	22-12-2021
ಉತ್ತರಿಸುವವರು	ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದ ನೀಲಸಂದ್ರ ಸರ್ವೆ ನಂ 79ರಲ್ಲಿ ಇರುವ ಒಟ್ಟು ಜಾಗ ಎಷ್ಟು; ಪ್ರಸ್ತುತ ಈ ಜಾಗದ ಪಹಣಿ ಯಾರ ಹೆಸರಿನಲ್ಲಿದೆ;	ನೀಲಸಂದ್ರ ಸರ್ವೆನಂ 79 ಆಕಾರ್ ಬಂದಿನಂತೆ ಮೂಲತಃ ಒಟ್ಟು 15 ಎಕರೆ 12 ಗುಂಟೆ ಸರ್ಕಾರಿ 'ಬಿ' ಖರಾಬಿನಲ್ಲಿ ದಾಖಲಾಗಿದ್ದು, ನಂತರ ಪೋಡಿಯಾದಂತೆ ಹೊಸ ಸರ್ವೇ ನಂ:119ರಲ್ಲಿ 3ಎ 8ಗು ಹಾಗೂ ಸ.ನಂ:120ರಲ್ಲಿ 39ಗು ಎಂದು ದುರಸ್ಥಿಯಾಗಿ ರಿ ಸ.ನಂ.79ರಲ್ಲಿ 11ಎ 5ಗು ಜಮೀನು ಉಳಿದಿದ್ದು, ಸರ್ಕಾರಿ 'ಬಿ' ಖರಾಬಿನಲ್ಲಿ ದಾಖಲಾಗಿರುತ್ತದೆ.
ಆ	ಬೆಂಗಳೂರು ನಗರದ ಬೊಮ್ಮನಹಳ್ಳಿ ಸರ್ವೇನಂ 39ರಲ್ಲಿ ಇರುವ ಒಟ್ಟು ಜಾಗ ಎಷ್ಟು; ಈ ಜಾಗದ ಖಾತೆ/ಪಹಣಿಯಲ್ಲಿ ಯಾರ ಹೆಸರಿದೆ; ಪ್ರಸ್ತುತ ಈ ಜಾಗ ಯಾರ ವಶದಲ್ಲಿದೆ;	ಬೊಮ್ಮನಹಳ್ಳಿ ಸರ್ವೆ ನಂ.39ರಲ್ಲಿ ಒಟ್ಟು ವಿಸ್ತೀರ್ಣ 2-15 ಎ/ಗು ಇದ್ದು 0-01 'ಅ' ಖರಾಬು ಜಾತ 2-14ಎ/ಗು ವಿಸ್ತೀರ್ಣದ ಪಹಣಿ ಕಾಲಂ 9ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೆಸರಿನಲ್ಲಿರುತ್ತದೆ.
ಇ	ಬೆಂಗಳೂರು ನಗರ ಎಸ್. ಕರಿಯಪ್ಪ ರಸ್ತೆಯಲ್ಲಿರುವ ಸರ್ವೇ.ನಂ75/2 ರಲ್ಲಿರುವ ಒಟ್ಟು ಜಾಗ ಎಷ್ಟು; ಈ ಜಾಗ ಯಾರ ಹೆಸರಿನಲ್ಲಿದೆ; ಈ ಜಾಗದಖಾತೆ/ ಪಹಣಿಯಲ್ಲಿ ಯಾರ ಹೆಸರಿನಲ್ಲಿದೆ; ಪ್ರಸ್ತುತ ಈ ಜಾಗ ಯಾರ ವಶದಲ್ಲಿದೆ;	ಉತ್ತರಹಳ್ಳಿ ಹೋಬಳಿ, ಸಾರಕ್ಕಿ ಗ್ರಾಮದ ಎಸ್.ಕರಿಯಪ್ಪ ರಸ್ತೆಯಲ್ಲಿರುವ ಸ.ನಂ.75/2ರಲ್ಲಿ 2-22ಎ/ಗು ವಿಸ್ತೀರ್ಣವು ಬನಶಂಕರಮ್ಮ ದೇವಸ್ಥಾನದ ಹೆಸರಿನಲ್ಲಿರುತ್ತದೆ.
ಈ	ಬೆಂಗಳೂರು ನಗರ ಜಿಲ್ಲೆಯ ಬೇಗೂರು ಗ್ರಾಮದ ಸರ್ವೇ.ನಂ 73 ರಲ್ಲಿರುವ ಒಟ್ಟು ಜಾಗ ಎಷ್ಟು; ಈ ಜಾಗ ಯಾರ ಹೆಸರಿನಲ್ಲಿದೆ; ಈ ಜಾಗದಖಾತೆ/ ಪಹಣಿಯಲ್ಲಿ ಯಾರ ಹೆಸರಿದೆ; ಪ್ರಸ್ತುತ ಈ ಜಾಗ ಯಾರ ವಶದಲ್ಲಿದೆ;	ಬೇಗೂರು ಗ್ರಾಮದ ಸರ್ವೇ ನಂ.73ರಲ್ಲಿ ಒಟ್ಟು ವಿಸ್ತೀರ್ಣ 8-35ಎ/ಗು ಇದ್ದು, 0-02 'ಅ' ಖರಾಬು ಜಾತ 8-33ಎ/ಗು ವಿಸ್ತೀರ್ಣದ ಪಹಣಿ ಕಾಲಂ 9ರಲ್ಲಿ ಬೆಂಗಳೂರು ಸಿಟಿ ಕಾಶಿ ವಿಶ್ವೇಶ್ವರ ದೇವರ ಹೆಸರಿನಲ್ಲಿರುತ್ತದೆ.

ಉ	ಬೆಂಗಳೂರು ನಗರ ಜಿಲ್ಲೆಯ ಕೋರಮಂಗಲ ಗ್ರಾಮದ ಸರ್ವೇ ನಂ 36 ರಲ್ಲಿರುವ ಒಟ್ಟು ಜಾಗ ಎಷ್ಟು; ಈ ಜಾಗ ಯಾರ ಹೆಸರಿನಲ್ಲಿದೆ; ಈ ಜಾಗದ ಖಾತೆ/ಪಹಣಿಯಲ್ಲಿ ಯಾರ ಹೆಸರಿದೆ; ಪ್ರಸ್ತುತ ಈ ಜಾಗ ಯಾರ ವಶದಲ್ಲಿದೆ; (ವಿವರ ನೀಡುವುದು)	ಕೋರಮಂಗಲ ಗ್ರಾಮದ ಸ.ನಂ.36ರಲ್ಲಿ ಒಟ್ಟು ವಿಸ್ತೀರ್ಣ 83-30 ಎ/ಗು ಇದ್ದು ಸರ್ಕಾರಿ ಕೆರೆ ಅಂಗಳ 00-00 ಇದ್ದು, ಕೆ.ಎಸ್.ಆರ್.ಟಿ.ಸಿ (ನಗರಸಾರಿಗೆ) 5-00ಎ/ಗು ಈ ಜಾಗ ಎನ್.ಡಿ.ಆರ್.ಐ ಸರ್ಕಾರಿ ಒತ್ತುವರಿ 48-29 ಎ/ಗು ಕೊಳಗೇರಿ ನಿವೇಶನಗಳು ಖಾಸಗಿ ಒತ್ತುವರಿ 33-21ಎ/ಗು ಈ ಜಾಗ ಎನ್.ಡಿ.ಆರ್.ಐ ಕೊಳಗೇರಿ ನಿವೇಶನಗಳು ಕೆ.ಎಸ್.ಆರ್.ಟಿ.ಸಿ ನಗರ ಸಾರಿಗೆ ಮತ್ತು ಕೊಳಚೆ ನಿರ್ಮೂಲನಾ ಮಂಡಳಿರವರ ವಶದಲ್ಲಿದ್ದು, ಈ ಪ್ರದೇಶವು ಅಭಿವೃದ್ಧಿ ಹೊಂದಿರುವ ಪ್ರದೇಶವಾಗಿದ್ದು, ಬಿ.ಬಿ.ಎಂ.ಪಿ ಕೋರಮಂಗಲ ವಲಯರವರ ವಶದಲ್ಲಿರುತ್ತದೆ.

ಕಂಇ 272 ಎಂಆರ್ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು